**ಇಂದು ದಿನಾಂಕಃ 18-11-2023 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಆರ್.ಹೆಚ್.ಆರ್ ವಕೀಲರಿಂದಃ-**

ಶಂಕ್ರಮ್ಮ ನನ್ನ ಹೆಂಡತಿ. ತಾರಾಬಾಯಿ ನನ್ನ ಮೊದಲನೇ ಹೆಂಡತಿ. ತಾರಾಬಾಯಿಯಿಂದ ವಾದಿ ಜನಿಸಿರುತ್ತಾನೆ ಎಂದರೆ ಸರಿ. 1996 ರಿಂದ 4 ನೇ ಎದುರುದಾರಳ ಜೊತೆ ನಾನು ಇದ್ದೇನೆ. 6 ನೇ ಎದುರುದಾರಳು ನನ್ನ ತಂಗಿ ಎಂದರೆ ಸರಿ.

ಸ.ನಂ. 34/4 ರಲ್ಲಿರುವ ಜಮೀನು ನಾನು ಖರೀದಿ ಮಾಡಿದ್ದು ಎಂದರೆ ಸಾಕ್ಷಿ ಬುಗ್ಗಪ್ಪ ರವರು ಶಾಂತಮ್ಮ ರವರಿಗೆ ದಾನ ನೀಡಿದ್ದಾರೆ ಎಂದು ನುಡಿಯುತ್ತಾರೆ. ದಾನ ಪತ್ರ ನನ್ನ ಹತ್ತಿರವಿದೆ. ಸದರಿ

ದಾನ ಪತ್ರ ನೊಂದಣಿಯಾಗಿದೆ. ಸ.ನಂ. 34/4 ರ ಜಮೀನು 6 ನೇ ಎದುರದಾರರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 34/4 ರಲ್ಲಿರುವ 4 ಎಕರೆ 4 ಗುಗಂಟೆ ಜಮೀನಿನ ಮಾಹಿತಿ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಸಂ.ನಂ. 43/1 ರ ಜಮೀನಿನ ಬಗ್ಗೆ ನನಗೆ ಮಾಹಿತಿ ಇಲ್ಲ. ಸ.ನಂ. 43 ರಲ್ಲಿರುವ ಜಮೀನು 2 ನೇ ಎದುರುದಾರರ ಹೆಸರಿನಲ್ಲಿದೆ ಎಂದರೆ ಸರಿ. ಸ.ನಂ. 43 ರಲ್ಲಿರುವ ಜಮೀನು 2 ನೇ ಎದುರುದಾರ ಹೇಗೆ ಪಡೆದಿದ್ದಾನೆ ಎಂದು ನನಗೆ ಮಾಹಿತಿ ಇಲ್ಲ. 2 ನೇ ಎದುರುದಾರ ನನ್ನ ತಮ್ಮ. ನಾನು ಮತ್ತು 2 ನೇ ಎದುರುರಾದರ ಈಗ ಒಟ್ಟಿಗೆ ಇರುವುದಿಲ್ಲ ಹಾಗೂ ಪಾಲು ಮಾಡಿಕೊಂಡಿರುವುದಿಲ್ಲ. 1996 ರಲ್ಲಿ ಪಾಲು ಮಾಡಿಕೊಂಡಿದ್ದೇವೆ. ಸದರಿ ಪಾಲುಗಾರಿಕೆಯಲ್ಲಿ ನಾನು ಮತ್ತು ನನ್ನ ತಮ್ಮ ಪಾಲು ಮಾಡಿಕೊಂಡಿದ್ದೇವೆ. ಸದರಿ ಪಾಲುಗಾರಿಕೆಯಲ್ಲಿ ನನ್ನ ಪಾಲಿಗೆ ಸ.ನಂ. 33, 34, 31, 48 ಮತ್ತು 76 ರಲ್ಲಿ ಸ್ವಲ್ಪ ಜಮೀನುಗಳು ಬಂದಿವೆ. ಎಲ್ಲಾ ಜಮೀನುಗಳಲ್ಲಿ ಸಮ ಪಾಲು ಬಂದಿರುತ್ತವೆ. ಪಾಲುಗಾರಿಕೆ ಆದ ಬಗ್ಗೆ ಯಾವುದೇ ದಾಖಲೆ ಇಲ್ಲ.

ಸ.ನಂ. 70/2 ರಲ್ಲಿರುವ ಜಮೀನು ನಾನು ಮತ್ತು ನನ್ನ ತಮ್ಮ ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸ.ನಂ. 70/2 ರ ಜಮೀನು ನನ್ನ ತಂದೆಯ ಆಸ್ತಿಯಾಗಿದೆ. ಸೇಡಂದಲ್ಲಿರುವ ಮನೆ ಸಂಖ್ಯೆ 3-9-64/2 ನನ್ನ ತಮ್ಮ ಖರೀದಿ ಮಾಡಿ ಗೌರಮ್ಮರವರಿಗೆ ನೀಡಿದ್ದಾರೆ. ಸ.ನಂ. 172/6 ರಲ್ಲಿರುವ 6 ಗುಂಟೆ ಜಮೀನು ಮತ್ತು ಸ.ನಂ. 144 ರಲ್ಲಿರುವ 15 ಗುಂಟೆ 34 ಎಕರೆ ಜಮೀನು 4 ನೇ ಎದುರುರಾದರರ ಹೆಸರಿನಲ್ಲಿ ಇವೆ ಎಂದರೆ ಸರಿ. ಸ.ನಂ. 172 ಮತ್ತು 144 ಜಮೀನು ನಾನು ಖರೀದಿ ಮಾಡಿದ್ದೇನೆ ಎಂದರೆ ಸಾಕ್ಷಿ 4 ನೇ ಎದುರುದಾರಳ ತಂದೆ 4 ನೇ ಎದುರುರಾಳಿಗೆ ನೀಡಿರುತ್ತಾರೆ. ಈ ರೀತಿ ನೊಂದಾಯಿತ ದಾನ ಪತ್ರದ ಮುಖಾಂತರ ನೀಡಿರುತ್ತಾರೆ.

5 ನೇ ಎದುರದಾರರ ಹೆಸರಿನಲ್ಲಿ 4 ಎಕರೆ ಜಮೀನು ಇದೆ. ನನ್ನ ತಕರಾರೀನಲ್ಲಿ ನಾನು ಮತ್ತು ನನ್ನ ತಮ್ಮ ಬೇರೆಯಾಗಿರುವ ಬಗ್ಗೆ ಉಲ್ಲೇಖವಿದೆ. ನನ್ನ ತಕರಾರಿನಲ್ಲಿ ಸ.ನಂ. 43 ರಲ್ಲಿರುವ ಜಮೀನು ಹಾಗೂ ಸೇಡಂನಲ್ಲಿರುವ ಮನೆ 2 ನೇ ಎದುರುದಾರ ಖರೀದಿ ಮಾಡಿದ್ದಾನೆ ಎಂದು ಉಲ್ಲೇಖವಿಲ್ಲ. ನಾನು ಮತ್ತು 2 ರಿಂದ 5 ನೇ ಎದುರುದಾರರು ಒಟ್ಟಿಗೆ ಇರುತ್ತೇವೆ ಎಂದರೆ ಸಾಕ್ಷಿ 2 ನೇ ಎದುರುದಾರರು ಮಾತ್ರ ಬೇರೆ ಇರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮಗ ವಾಧಿಗೆ ಪಾಲು ನೀಡಬೇಕಾಗುತ್ತದೆ ಎಂದು ತಿಳಿದು ದಾನ ಕೊಟ್ಟಿದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ 20 ಎಕರೆ ಜಮೀನಿನಲ್ಲಿ 7 ಎಕರೆ ನೀಡಲು ಸಿದ್ದನಿದ್ದೇನೆ ಎಂದು ನುಡಿಯುತ್ತಾರೆ. ದಾವಾ 8 ರಿಂದ 14 ಜಮೀನುಗಳು ವ್ಯವಸಾಯದ ಹಣದಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಆಸ್ತಿ ಕೊಡಬೇಕೆಂದು ತಿಳಿದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ 1 ರಿಂದ 14 ಆಸ್ತಿಗಳು ಜಂಟಿ ಕುಟುಂಬ ಆಸ್ತಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**